ಉದಯವಾಣಿ

13.04.2016

ಆನ್ ಲೈನ್ ■ ಕರ್ನಾಟಕದ ಏಕೀಕೃತ ಮಾರುಕಟ್ಟೆ ವ್ಯವಸ್ಥೆ ದೇಶಾದ್ಯಂತ ಜಾರಿಗೆ ■ ನಾಳೆ ಪ್ರಧಾನಿ ಮೋದಿಯಿಂದ ಚಾಲನೆ

# ರಾಜ್ಯದ ರೈತರಿಗೀಗ ಇಡೀ ದೇಶ ಮಾರುಕಟ್ಟೆ

■ ವಿಶೇಷ ವರದಿ

ಬೆಂಗಳೂರು: ರಾಜ್ಯದ ಎಪಿಎಂಸಿ ಮಾರುಕಟ್ಟೆಗಳಲ್ಲಿ ಜಾರಿಗೆ ತಂದಿರುವ ಏಕೀಕೃತ ಮಾರುಕಟ್ಟೆ ವ್ಯವಸ್ಥೆ ಇದೀಗ ದೇಶಕ್ಕೆ ಮಾದರಿಯಾಗಿದ್ದು, ನ್ಯಾಷನಲ್ ಅಗ್ರಿಕಲ್ಚರಲ್ ಮಾರ್ಕೆಟ್ ಹೆಸರಿನಲ್ಲಿ ರಾಷ್ಟ್ರವ್ಯಾಪಿ ಅನುಷ್ಠಾನಕ್ಕೆ ಬರುತ್ತಿದೆ.

ಇದರಿಂದಾಗಿ ಮುಂದಿನ ದಿನಗಳಲ್ಲಿ ಕರ್ನಾಟಕದ ಮಾರುಕಟ್ಟೆಗಳೊಂದಿಗೆ ರಾಷ್ಟ್ರದ ಎಲ್ಲ ರಾಜ್ಯಗಳ ಮಾರುಕಟ್ಟೆಗಳ ನಡುವೆಯೂ ಸಂಪರ್ಕ ಏರ್ಪಡಲಿದ್ದು, ನಮ್ಮ ರೈತರ ಉತ್ಪನ್ನಗಳಿಗೆ ರಾಷ್ಟ್ರೀಯ ಮಾರುಕಟ್ಟೆ ಲಭ್ಯವಾಗಲಿದೆ.

ಆಯಾ ದಿನದ ಉತ್ಪನ್ನದ ಬೇಡಿಕೆ ಹಾಗೂ ಗುಣಮಟ್ಟದ ಆಧಾರದ ಮೇಲೆ ರೈತರು ನ್ಯಾಯಯುತ ಬೆಲೆ ಪಡೆಯಲು ಅನುಕೂಲವಾಗಲಿದೆ. ದೂರದ ಗುಜರಾತ್, ಪಶ್ಚಿಮ ಬಂಗಾಳ, ರಾಜಸ್ಥಾನದಲ್ಲಿರುವ ವರ್ತಕರು ಅಲ್ಲೇ ಕುಳಿತು ಆನ್‌ಲೈನ್ ವಹಿವಾಟು ಮೂಲಕ ನಮ್ಮ ರೈತರ ಉತ್ಪನ್ನ ಖರೀದಿಸಬಹುದಾಗಿದೆ.

> **ಕ**ರ್ನಾಟಕದ ಮಾದರಿಯನ್ನೇ ಈಗ ರಾಷ್ಟ್ರವ್ಯಾಪಿ ಜಾರಿಗೆ ತರಲಾಗುತ್ತಿದೆ. ಇದರಿಂದ ಮುಂದಿನ ದಿನಗಳಲ್ಲಿ ನಮ್ಮ ರೈತರ ಉತ್ಪನ್ನಗಳಿಗೆ ರಾಷ್ಟ್ರವ್ಯಾಪಿ ಮಾರುಕಟ್ಟೆ ಲಭ್ಯವಾಗಲಿದೆ. ಈಗಾಗಲೇ ನಮ್ಮಿಂದ ಲೈಸೆನ್ಸ್ ಪಡೆದಿರುವ ತಮಿಳುನಾಡು, ಕೇರಳ, ಆಂಧ್ರ, ತೆಲಂಗಾಣದ ವರ್ತಕರು ರಾಜ್ಯದ ಎಪಿಎಂಸಿ ಮಾರುಕಟ್ಟೆಗಳಲ್ಲಿ ಆನ್‌ಲೈನ್ ವಹಿವಾಟು ನಡೆಸುತ್ತಿದ್ದಾರೆ. ಇದು ಮತ್ತಷ್ಟು ವಿಸ್ತರಣೆಯಾಗಲಿದೆ.
>
> ● ಆರ್.ಮನೋಜ್, ಸಹಕಾರ ಇಲಾಖೆ (ಮಾರುಕಟ್ಟೆ ಸುಧಾರಣೆ) ಹೆಚ್ಚುವರಿ ಕಾರ್ಯದರ್ಶಿ

ಈ ವ್ಯವಸ್ಥೆಯಿಂದಾಗಿ ಮಧ್ಯವರ್ತಿಗಳ ಹಾವಳಿ, ಕೃತಕ ಬೆಲೆ ಕುಸಿತ ಸೃಷ್ಟಿಸಿ ಕಡಿಮೆ ಬೆಲೆಗೆ ರೈತರ ಉತ್ಪನ್ನ ಖರೀದಿಸುವುದು ತಪ್ಪಲಿದೆ. ಇಂಥದ್ದೊಂದು ವ್ಯವಸ್ಥೆಯನ್ನು ಮೊದಲ ಬಾರಿಗೆ ಪರಿಚಯಿಸಿದ ಕೀರ್ತಿ ಕರ್ನಾಟಕದ್ದಾಗಿದ್ದು, 'ರಾಷ್ಟ್ರೀಯ ಇ-ಮಾರ್ಕೆಟ್ ಸಿಸ್ಟಮ್' ಮೂಲಕ ರಾಜ್ಯದ 105 ಎಪಿಎಂಸಿಗಳಲ್ಲಿ ಏಕೀಕೃತ ಮಾರುಕಟ್ಟೆ ಪದ್ಧತಿ ಜಾರಿಗೆ ತಂದಿತ್ತು. ಕಳೆದ ವರ್ಷ ಜುಲೈನಲ್ಲಿ ರಾಜ್ಯಕ್ಕೆ ಆಗಮಿಸಿದ್ದ ವಿವಿಧ ರಾಜ್ಯ ಹಾಗೂ ಕೇಂದ್ರದ ಅಧಿಕಾರಿಗಳ ತಂಡ ಆನ್‌ಲೈನ್ ಮಾರ್ಕೆಟಿಂಗ್ ಬಗ್ಗೆ ಮಾಹಿತಿ ಪಡೆದು ರಾಷ್ಟ್ರವ್ಯಾಪಿ ಜಾರಿಗೆ ತರುವ ಇಂಗಿತ ವ್ಯಕ್ತಪಡಿಸಿತ್ತು.

ಅದರಂತೆ ಪ್ರಧಾನಿ ನರೇಂದ್ರ ಮೋದಿಯವರು ಗುರುವಾರ (ಏಪ್ರಿಲ್ 14) ನ್ಯಾಷನಲ್ ಅಗ್ರಿಕಲ್ಚರಲ್ ಮಾರ್ಕೆಟ್ ಯೋಜನೆಯಡಿ ದೇಶದ 20 ಪ್ರಮುಖ ಎಪಿಎಂಸಿ ಮಾರುಕಟ್ಟೆಗಳ ನಡುವಿನ ಆನ್‌ಲೈನ್ ವಹಿವಾಟು ವ್ಯವಸ್ಥೆಗೆ ಚಾಲನೆ ನೀಡಲಿದ್ದಾರೆ. ಆ ನಂತರ ಕರ್ನಾಟಕದ್ದೂ ಸೇರಿದಂತೆ 200 ಮಾರುಕಟ್ಟೆಗಳು ಈ ಯೋಜನೆಯಡಿ ಸೇರ್ಪಡೆಯಾಗಲಿವೆ ಎಂದು ಮೂಲಗಳು ತಿಳಿಸಿವೆ.

**ಏನಿದು ಆನ್‌ಲೈನ್ ವ್ಯವಸ್ಥೆ?** ರಾಜ್ಯದ 105 ಎಪಿಎಂಸಿಗಳಲ್ಲಿ ಈ ವ್ಯವಸ್ಥೆ ಜಾರಿಯಲ್ಲಿದ್ದು, ಆಯಾ ಎಪಿಎಂಸಿ ವ್ಯಾಪ್ತಿಯಲ್ಲಿ ಸದಸ್ಯತ್ವ ಪಡೆದಿರುವ ರೈತರನ್ನು ನೋಂದಣಿ ಮಾಡಿಸಿ ವರ್ತಕರಿಗೂ ಏಕರೂಪದ ಲೈಸೆನ್ಸ್ ನೀಡಲಾಗಿದೆ. ಆಯಾ ದಿನ ಮಾರುಕಟ್ಟೆಗಳಲ್ಲಿ ಯಾವ್ಯಾವ ಉತ್ಪನ್ನಕ್ಕೆ ಎಷ್ಟು ದರ ಎಂಬ ಬಗ್ಗೆ ಮಾರುಕಟ್ಟೆಗೆ ಬರುವ ರೈತರಿಗೆ ಮಾಹಿತಿ ನೀಡಲಾಗುತ್ತದೆ. ಜತೆಗೆ ರೈತರ ಮೊಬೈಲ್‌ಗಳಿಗೂ ಎಸ್‌ಎಂಎಸ್ ಮೂಲಕ ಮಾಹಿತಿ ಕಳುಹಿಸುವ ವ್ಯವಸ್ಥೆ ಇದೆ.

ರೈತರು ತಮ್ಮ ಉತ್ಪನ್ನಗಳನ್ನು ಎಪಿಎಂಸಿ ಮಾರುಕಟ್ಟೆಗೆ ತಂದಾಗ ಆನ್‌ಲೈನ್ ಮೂಲಕ ವರ್ತಕರು ತಮಗೆ ಬೇಕಾದ ಉತ್ಪನ್ನಕ್ಕೆ ಬಿಡ್ ಸಲ್ಲಿಸಿ ಖರೀದಿಸಬಹುದು. ರೈತ ಬಯಸಿದರೆ ಮಾರಾಟಕ್ಕೆ ಒಪ್ಪಿಗೆ ಸೂಚಿಸಬಹುದು. ಹಾಗೆ ಖರೀದಿ ಮಾಡಿದ ಉತ್ಪನ್ನಕ್ಕೆ ಆನ್‌ಲೈನ್ ಮೂಲಕವೇ ಬ್ಯಾಂಕ್‌ಗೆ ಹಣ ಪಾವತಿಸಬೇಕು. ಆ ಹಣ ನೇರವಾಗಿ ರೈತರ ಖಾತೆಗಳಿಗೆ ಜಮೆ ಆಗುತ್ತದೆ.

ಏಕೀಕೃತ ಮಾರುಕಟ್ಟೆ ವ್ಯವಸ್ಥೆ ಕುರಿತು 'ಉದಯವಾಣಿ'ಗೆ ಮಾಹಿತಿ ನೀಡಿದ ಸಹಕಾರ ಇಲಾಖೆ (ಮಾರುಕಟ್ಟೆ ಸುಧಾರಣೆ) ಹೆಚ್ಚುವರಿ ಕಾರ್ಯದರ್ಶಿ ಹಾಗೂ ರಾಷ್ಟ್ರೀಯ ಇ-ಮಾರ್ಕೆಟ್ ಸಿಸ್ಟಮ್‌ನ ವ್ಯವಸ್ಥಾಪಕ ನಿರ್ದೇಶಕ ಆರ್.ಮನೋಜ್, ರಾಜ್ಯದಲ್ಲಿ 157 ಎಪಿಎಂಸಿ ಮಾರುಕಟ್ಟೆಗಳಿದ್ದು, ಆ ಪೈಕಿ 105 ಮಾರುಕಟ್ಟೆಗಳಲ್ಲಿ ಆನ್‌ಲೈನ್ ವಹಿವಾಟು ವ್ಯವಸ್ಥೆಯಿದೆ.